**ಎಂ.ವಿ.ಸಿ. ನಂ. 26 / 2023**
**ಪಿ. ಡಬ್ಲ್ಯೂ 1.**

**ದಿನಾಂಕಃ 24-12-2024**

ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಅರ್ಜಿದಾರ ಪರಃ ವಕೀಲರಾದ ಃ ಶ್ರೀ.ಎನ್.ಜಿ.ಆರ್. ರವರಿಂದ ಃ

ಈ ಅರ್ಜಿಯಲ್ಲಿ ನಾನು ಅರ್ಜಿದಾನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತದೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ಈ ಕೆಳಗಿನ ದಾಖಲೆಗಳನು ಹಾಜರುಪಡಿಸಿರುತ್ತೇನೆ.

1. ಪ್ರ.ದ. ವರದಿಯ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು.

2. ದೂರಿನ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.

3. ಅಂತಿಮ ವರದಿಯನ್ನು ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 3 ಎಂದು ಗುರುತಿಸಲಾಯಿತು.

4. ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

5. ಮೋಟಾರು ವಾಹನ ವರದಿಯ ದೃಡೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು.

6. ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿರುತ್ತಾರೆ ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

7. ಕ್ಷ-ಕಿರಣ ವರದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 7 ಎಂದು ಗುರುತಿಸಲಾಯಿತು.

8. ಎರಡು ಕ್ಷ-ಕಿರಣ ಚಿತ್ರವನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 8 ಮತ್ತು 9 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಂತೆ ಆದೇಶಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲುಃ ಈ ಅರ್ಜಿಯಲ್ಲಿ ಎದುರುದಾರರು ಹಾಜರು ಆಗಿರುವುದಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ